# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1161 (1027) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2025-26ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಗೆ ರೂ.10 ಕೋಟಿ ಅನುದಾನ ನೀಡಿರುವುದು ಯಾವ ಉದ್ದೇಶಕ್ಕಾಗಿ (ವಿವರ ನೀಡುವುದು) | 2025-26ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.10.50 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಸದರಿ ಅನುದಾನವನ್ನು ಕರಾವಳಿ ಅಭಿವೃದ್ಧಿ ಮಂಡಳಿ ಕಾಯ್ದೆ 2023ರ ಪ್ರಕರಣ 12 ರಲ್ಲಿ ಸೂಚಿಸಿರುವಂತೆ ಅನುಬಂಧ-1ರಲ್ಲಿ ನೀಡಲಾಗಿರುವ ಯೋಜನೆಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ಕರಾವಳಿ ಅಭಿವೃದ್ಧಿ ಮಂಡಳಿ ಇತರ ಮಂಡಳಿಗೆ ಹೋಲಿಸಿದ್ದಲ್ಲಿ, ಕೇವಲ ಹೆಸರಿಗೆ ಮಾತ್ರ ಕಾರ್ಯನಿರ್ವಹಿಸುತ್ತಿರುವುದು ಸರಿಯೇ ಈ ಮಂಡಳಿಯ ನಿರ್ಲಕ್ಷಕ್ಕೆ ಕಾರಣವೇನು; (ವಿವರ ನೀಡುವುದು) | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗಳು ರಾಜ್ಯದ 10 ಜಿಲ್ಲೆಗಳ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತವೆ. ಆದರೆ ಕರಾವಳಿ ಅಭಿವೃದ್ಧಿ ಮಂಡಳಿಯು 3 ಜಿಲ್ಲೆಗಳ ಕಾರ್ಯವ್ಯಾಪ್ತಿಯನ್ನು ಹೊಂದಿರುವುದರಿಂದ ಇತರೆ ಮಂಡಳಿಗಳಿಗೆ ನೀಡಿರುವ ಅನುದಾನಕ್ಕೆ ಹೋಲಿಕೆ ಮಾಡಿದ್ದಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ನಿರ್ಲಕ್ಷಿಸದೇ ಇರುವುದು ಕಂಡು ಬರುತ್ತದೆ.<br>ಸರ್ಕಾರವು ಎಲ್ಲಾ ಮಂಡಳಿಗಳನ್ನು ಏಕರೂಪದಲ್ಲೇ ಪರಿಗಣಿಸಿರುತ್ತದೆ. |
| (ಇ) | ಕರಾವಳಿ ಅಭಿವೃದ್ಧಿ ಮಂಡಳಿಯಲ್ಲಿ ಎಷ್ಟು ಮಂದಿ ಸಿಬ್ಬಂದಿಗಳಿದ್ದಾರೆ; ಅವರಿಗೆ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು) ಕರಾವಳಿ ಅಭಿವೃದ್ಧಿ ಮಂಡಳಿಯಿಂದ 2023-24 ಮತ್ತು 2024-25ರಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಯಾವುವು? (ವಿವರ ನೀಡುವುದು) | ಕರಾವಳಿ ಅಭಿವೃದ್ಧಿ ಮಂಡಳಿಯ ಸಿಬ್ಬಂದಿಯ ವಿವರವನ್ನು ಹಾಗೂ ಅವರಿಗೆ ತಗಲುವ ವೆಚ್ಚದ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br>ಕರಾವಳಿ ಅಭಿವೃದ್ಧಿ ಮಂಡಳಿಯಿಂದ 2023-24 ಮತ್ತು 2024-25ರಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಪಿಡಿಎಸ್/60/ಪಿಟಿಪಿ/2025**

**(ಡಿ.ಸುಧಾಕರ್)**

## ಅನುಬಂಧ-1

**ಮಂಡಳಿಯ ಉದ್ದೇಶಗಳು :**

I. ಕರಾವಳಿ ಪ್ರದೇಶದಲ್ಲಿನ ಜಲ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸುವುದು.

II. ಕರಾವಳಿ ಪ್ರದೇಶದಲ್ಲಿರುವ ಮಳೆ ಆಶ್ರಿತ ಕೃಷಿ ಪದ್ಧತಿಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು.

III. ಕರಾವಳಿ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿಪಡಿಸುವುದು.

IV. ಕರಾವಳಿ ಪ್ರದೇಶದಲ್ಲಿ ತೋಟಗಾರಿಕೆಯ ಅಭಿವೃದ್ಧಿಯನ್ನು ಉತ್ತೇಜಿಸುವುದು.

V. ಕರಾವಳಿ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಚಟುವಟಿಕೆಗಳನ್ನು ಬೆಂಬಲಿಸುವುದು ಮತ್ತು ಉತ್ತೇಜಿಸುವುದು.

VI. ಕರಾವಳಿ ಪ್ರದೇಶದಲ್ಲಿ ಪಶುಸಂಗೋಪನೆ, ಮೀನುಗಾರಿಕೆ, ಒಳನಾಡು ಜಲ ಸಾರಿಗೆ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವುದು.

VII. ಸರ್ಕಾರವು ನಿರ್ದೇಶಿಸುವಂಥ ಇತರೆ ಉದ್ದೇಶಗಳು.

ಅನುಬಂಧ - 2

| ಕ್ರ.ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| | **ಅಧ್ಯಕ್ಷರ ಆಪ್ತಶಾಖೆ** | | | |
| 1. | ಆಪ್ತಕಾರ್ಯದರ್ಶಿ | 01 | 01 | 00 |
| 2. | ಗ್ರೂಪ್ – ಸಿ | 02 | 00 | 02(**) |
| 3. | ವಾಹನ ಚಾಲಕರು | 01 | 00 | 01(**) |
| 4. | ಗ್ರೂಪ್ 'ಡಿ' | 02 | 00 | 02(**) |
| | **MIÄÖ** | **06** | **01** | **05** |
| | **ಕಾರ್ಯದರ್ಶಿಯವರ ಕಛೇರಿ** | | | |
| 1. | ಕಾರ್ಯದರ್ಶಿ (ಕೆ.ಎ.ಎಸ್. ಹಿರಿಯ ಶ್ರೇಣಿ) | 01 | 00(*) | 01 |
| 2. | ಕಛೇರಿ ವ್ಯವಸ್ಥಾಪಕರು (ಗ್ರೂಪ್-ಬಿ) | 01 | 00 | 01 |
| 3. | ಕಾರ್ಯಕಾರಿ ಸಹಾಯಕ / ಪ್ರಥಮ ದರ್ಜೆ ಸಹಾಯಕ | 01 | 00 | 01 (**) |
| 4. | ಲೆಕ್ಕಪರಿಶೋಧಕರು | 01 | 01 | 0 |
| 5. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಹಿರಿಯ ಜೂನಿಯರ್ ಇಂಜಿನೀಯರ್ | 01 | 00 (*) | 01 |
| 6. | ಶೀಘ್ರಲಿಪಿಗಾರರು | 01 | 00 | 01 (**) |
| 7. | ಡಾಟಾ ಎಂಟ್ರಿ ಆಪರೇಟರ್/ ಕಂಪ್ಯೂಟರ್ ಆಪರೇಟರ್ | 01 | 00 | 01 (**) |
| 8. | ಗ್ರೂಪ್ 'ಡಿ' | 01 | 00 | 01 (**) |
| | **ಒಟ್ಟು** | **14** | **02** | **12** |

| ಕ್ರ.ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಹೊರಗುತ್ತಿಗೆ ಮೂಲಕ ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ವಲಯಾಧಿಕಾರಿ (ತಾಂತ್ರಿಕ) | 04 | 02 | 01 |
| 9. | ವಲಯಾಧಿಕಾರಿ (ತಾಂತ್ರಿಕೇತರ) | | 01 | |

(*)ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.
(**) ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಅನುಬಂಧ - 3

| ಆರ್ಥಿಕ ವರ್ಷ | ಕಾಲುಸಂಕ | ತೂಗು ಸೇತುವೆಗಳು | ಮೀನು ಮಾರುಕಟ್ಟೆಗಳು | ಉದ್ಯಾನವನ | ತಡೆಗೋಡೆ | ವಾಣಿಜ್ಯ ಸಂಕೀರ್ಣ/ ಥೀಂಪಾರ್ಕ್ ರಂಗ ಮಂದಿರ | ಅಂಗನವಾಡಿ / ಶಾಲೆ / ಸಮುದಾಯ ಭವನ / ಕಟ್ಟಡ | ರಸ್ತೆ | ಇತರೆ | ಒಟ್ಟು |
|---|---|---|---|---|---|---|---|---|---|---|
| ಭೌತಿಕಸಂಖ್ಯೆ | | | | | | | | | | |
| 2023-24 | 10 | 1 | 6 | 3 | 0 | 0 | 23 | 206 | 40 | 289 |
| 2024-25 | 7 | 1 | 5 | 2 | 9 | 0 | 23 | 141 | 28 | 216 |

- ಇತರೆ (ರುದ್ರಭೂಮಿ, ಬೀದಿ ದೀಪ, ಕ್ರೀಡಾಂಗಣ ಅಭಿವೃದ್ಧಿ, ಶೌಚಾಲಯ, ಚರಂಡಿ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳು).
- 2025-26ನೇ ಸಾಲಿನ ಕ್ರಿಯಾಯೋಜನೆ ಅನುಮೋದನೆಯಾಗಿರುವುದಿಲ್ಲ.
- 2023-24 ಮತ್ತು 2024-25ನೇ ಸಾಲಿನ ಮುಂದುವರಿದ ಕಾಮಗಾರಿಗಳನ್ನು ಸೇರಿ ಒಟ್ಟು ಕಾಮಗಾರಿಗಳನ್ನು ನೀಡಲಾಗಿದೆ.